## ಜಿಲ್ಲಾ ಪಂಚಾಯತ ಬೆಳಗಾವಿ ನಡುವಳಿಗಳು

ವಿಷಯ: 2013-14ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಎರಡನೇ ಕಂತಿನ ಅನುದಾನಕ್ಕೆ ಹಂಚಿಕೆ ಮಾಡುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸ:ಮಮಇ 221 ಐಸಿಡಿ 2013, ಬೆಂಗಳೂರು,ದಿ:19-08-2013
2) ಸರ್ಕಾರದ ಪತ್ರ ಸಂ:ಗ್ರಾಅಪ:86:ಎಫ್‌ಎನ್:2013 ದಿ:18-04-2013.
3) ಉಪ ನಿರ್ದೇಶಕರು ಮಮಕ ಬೆಳಗಾವಿರವರ ಪತ್ರ ಸಂ:ಉನಿಬೆ:ಮಮಅಇ:ಅ.ವ:2013-14 ದಿ:21-08-2013.

******

ಪ್ರಸ್ತಾವನೆ :-

ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ 2013-14ನೇ ಸಾಲಿನ ಎರಡನೇ ಕಂತಿನ ಅನುದಾನ ಉಲ್ಲೇಖ (1)ರಂತೆ ಸರ್ಕಾರದಿಂದ ನೇರವಾಗಿ ತಾಲೂಕಾ ಪಂಚಾಯತಗಳಿಗ ಬಿಡುಗಡೆಯಾಗಿದೆ.. ಉಲ್ಲೇಖ (2)ರಲ್ಲಿ ತಾಲೂಕ ಪಂಚಾಯತ ಅನುದಾನ ಬಿಡುಗಡೆ ಮತ್ತು ವೆಚ್ಚವನ್ನು ನಿಯಂತ್ರಿಸಲು ಸೂಚನೆಯಿದ್ದಂತೆ ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ವೇತನ ಮತ್ತು ವೇತನೇತರಕ್ಕಾಗಿ ಹಂಚಿಕೆ ನೀಡಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

## ಆದೇಶ

ಸಂ:ಜಿಪಂಬೆ/ಮುಲೆಅ/2235/ಕೇಂದ್ರ/13-14

ದಿನಾಂಕ:28-08-2013.

ಸಮಗ್ರ ಶಿಶು ಅಭಿವೃದ್ಧಿ ಯೋಜನೆಅಡಿ 2013-14ನೇ ಸಾಲಿಗೆ 2ನೇ ಕಂತಿನ ಅನುದಾನ ವೇತನ ಮತ್ತು ವೇತನೇತರಕ್ಕಾಗಿ ಉಲ್ಲೇಖ (2)ರ ಸೂಚನೆಯಂತೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಮರುಹಂಚಿಕೆ ಮಾಡಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-I ರಲ್ಲಿ ಘೋಷವಾರ ಪತ್ರಿಕೆಯಲ್ಲಿ ಕಾಣಿಸಲಾಗಿದೆ.

1) ಸರಕಾರದಿಂದ ಬಿಡುಗಡೆಯಾದ ಅನುದಾನವನ್ನು ಬಿಳಿ ಬಣ್ಣದ ಪೇಯಿಸ್ ರಶೀದಿ (Payees Receipt) ಮೂಲಕ ತಾಲೂಕ ಪಂಚಾಯತ ನಿಧಿ I ಕ್ಕೆ ಜಮಾ ಮಾಡಿಕೊಳ್ಳುವದು. ಹಾಗೂ ಉದ್ದಿಶ್ಯ ಲೆಕ್ಕ ಶೀರ್ಷಿಕೆ (Obejective code) ವಾರು ಬಿಡುಗಡೆಯಾದ ಅನುದಾನದಕ್ಕೆ ಒಳಪಟ್ಟು ವೆಚ್ಚ ಭರಿಸುವದು.
2) ಮಾಹೆಯಾನ ತಾಲೂಕ ಪಂಚಾಯತಗಳಿಂದ ನಿಗಧಿತ ಸಮೂನೆಯಲ್ಲಿ 62 ಬಿ ಆಧರಿಸಿ ಮಾಸಿಕ ಲೆಕ್ಕ ಪತ್ರಗಳನ್ನು ಅನುಷ್ಠಾನಾಧಿಕಾರಿಗಳಿಂದ ಪಡೆದು ಲೆಕ್ಕ ಶೀರ್ಷಿಕೆವಾರು ವೆಚ್ಚ ನಿಯಂತ್ರಣ ಮಾಡುವುದು. ಮತ್ತು ಅದನ್ನು ಸಂಕಲಿಸಿ ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿರವರಿಗೆ ಪ್ರತಿ ತಿಂಗಳಿನ 9ನೇ ತಾರೀಖಿಗೆ ಕಳುಹಿಸುವದು.
3) ಸರ್ಕಾರದ ಆದೇಶದನುಸಾರ ಅನುಷ್ಠಾನ ಇಲಾಖೆಗಳಿಗೆ ಅನುದಾನ ಬಿಡುಗಡೆ ಮಾಡುವುದನ್ನು ಪರಿಶೀಲಿಸುವದು ಮತ್ತು ನಿಯಂತ್ರಿಸುವುದು.
4) ಎಲ್ಲ ತಾಪಂ. ಗಳು ಮಾಹೆಯಾನ ಮಹಾಲೇಖಪಾಲರೊಂದಿಗೆ ಲೆಕ್ಕ ಸಮನ್ವಯ ಮಾಡಿಕೊಳ್ಳುವುದನ್ನು ಪರಿಶೀಲಿಸುವುದು ಮತ್ತು ನಿಯಂತ್ರಿಸುವುದು.
5) ಸಕ್ಷಮ ಪ್ರಾಧಿಕಾರದಿಂದ ಕ್ರೀಯಾ ಯೋಜನೆ ಅನುಮೋದನೆ ಪಡೆದುಕೊಂಡು ಆ ಪ್ರಕಾರ ವೆಚ್ಚ ಭರಿಸುವುದು.
6) ವೇತನದ ಅನುದಾನವನ್ನು ವೇತನೇತರ ಬಾಬ್ತಿಗೆ ಬಳಸಕೂಡದು. 1-4-2013ರ ಹಿಂದಿನ ಯಾವುದೇ ಬಾಕಿಯನ್ನು ಅನುಮತಿಯಿಲ್ಲದೆ ಡ್ರಾ ಮಾಡಕೂಡದು. ಬಿಡುಗಡೆಯಾದ ಅನುದಾನಕ್ಕಿಂತ ಹೆಚ್ಚು ವೆಚ್ಚ ಮಾಡಿದಲ್ಲಿ ಸಂಬಂಧಿಸಿದ ಡ್ರಾಯಿಂಗ್ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

7) ಸರ್ಕಾರದಿಂದ ಅನುದಾನ ಬಿಡುಗಡೆಯಾದ ಎರಡು ದಿನಗಳಲ್ಲಿ ಅನುದಾನವನ್ನು ತಾಲೂಕು ಪಂಚಾಯತ ನಿಧಿಗೆ ಜಮೆ ಮಾಡಿಕೊಂಡು ಅನುಷ್ಠಾನಾಧಿಕಾರಿಗಳಿಗೆ ಮರು ಬಿಡುಗಡೆ ಮಾಡುವುದು ಹಾಗೂ ಮರು ಬಿಡುಗಡೆ ಆದೇಶಗಳನ್ನು ಪಂಚತಂತ್ರದ ತಾಲ್ಲೂಕು ಪಂಚಾಯತ್‌ನ ಪೋರ್ಟಲನಲ್ಲಿ ಕಡ್ಡಾಯವಾಗಿ ಅಪಲೋಡ್ ಮಾಡುವುದು ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಯವರ ಜವಾಬ್ದಾರಿ ಆಗಿರುತ್ತದೆ.

ಮುಖ್ಯ ಲೆಕ್ಕಾಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

ಪ್ರತಿಗಳನ್ನು :-

1)ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಳಗಾವಿರವರಿಗೆ ಮಾಹಿತಿಗಾಗಿ.

2)ಉಪ ನಿದೇಶಕರು, ಜಿಲ್ಲಾ ಖಜಾನೆ, ಬೆಳಗಾವಿ ಇವರಿಗೆ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕೆ ಕಳುಹಿಸಿದೆ.

3)ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ ___________ಇವರಿಗೆ ಸೂಕ್ತ ಕ್ರಮಕ್ಕೆ ಕಳುಹಿಸಿದೆ.

4)ಉಪ ಖಜಾನೆ ಅಧಿಕಾರಿಗಳು ತಾಲೂಕು ಖಜಾನೆ ________ಇವರಿಗೆ ಸೂಕ್ತ ಕ್ರಮಕ್ಕೆ ಕಳುಹಿಸಿದೆ.

ಮುಖ್ಯ ಲೆಕ್ಕಾಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

# ಅನುಬಂಧ-I

ಜಿಲ್ಲಾ ಪಂಚಾಯತ ಆದೇಶ ಸಂ:ಜಿಪಂಬೆ/ತಾಪಂಅ/2013-14ರಂತೆ ಸಾಲಿನ ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ 2 ನೇ ಕಂತಿನ ಅನುದಾನವನ್ನು ತಾಲೂಕ ಪಂಚಾಯತಗಳಿಗೆ ಮರು ಹಂಚಿಕೆ ಮಾಡಿದ ಘೋಷವಾರೆ ಪತ್ರಿಕೆ.

<u>ಯೋಜನೆ</u>

| ಲೆಕ್ಕ ಶೀರ್ಷಿಕೆ | | ಬೆಳಗಾವಿ | | | ಬೈಲಹೊಂಗಲ್ | ಖಾನಾಪೂರ | ಸವದತ್ತಿ | ರಾಮದುರ್ಗ | ಅಥಣಿ | | | ಚಿಕ್ಕೋಡಿ | | ಗೋಕಾಕ | | ಹುಕ್ಕೇರಿ | ರಾಯಬಾಗ | ಒಟ್ಟು |
|---|---|---|---|---|---|---|---|---|---|---|---|---|---|---|---|---|---|---|
| | | ಬೆಳಗಾವಿ (ನಗರ) | ಬೆಳಗಾವಿ (ಗ್ರಾಮೀಣ) | MOICDS ಬೆಳಗಾವಿ | | | | | ಅಥಣಿ | ಕಾಗವಾಡ | THO ಅಥಣಿ | ಚಿಕ್ಕೋಡಿ | ನಿಪ್ಪಾಣಿ | ಗೋಕಾಕ | ಅರಭಾವಿ | | | |
| **ICDS 2235-02-197-6-03** | | | | | | | | | | | | | | | | | | |
| 2211-00-102-0-22(P) ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಾಗಿ ಕೇಂದ್ರ ಪುರಸ್ಕೃತ ಯೋಜನೆ | ವೇತನ | 18.45 | 38.30 | 5.67 | 30.00 | 20.28 | 17.99 | 18.66 | 25.62 | 0.00 | 7.34 | 15.20 | 19.34 | 13.22 | 21.68 | 29.35 | 21.67 | 302.77 |
| 001-ವೇತನ 051 ಸಾಮಾನ್ಯ ವೆಚ್ಚ | ವೇತನೇತರ | 92.46 | 145.00 | 0.00 | 90.09 | 84.12 | 73.20 | 70.44 | 67.44 | 57.54 | 0.00 | 58.05 | 144.60 | 55.27 | 89.72 | 107.15 | 102.43 | 1237.51 |
| ಒಟ್ಟು | | **110.91** | **183.30** | **5.67** | **120.09** | **104.40** | **91.19** | **89.10** | **93.06** | **57.54** | **7.34** | **73.25** | **163.94** | **68.49** | **111.40** | **136.50** | **124.10** | **1540.28** |
| ಅಂತೂ ಒಟ್ಟು | | **299.88** | | | **120.09** | **104.40** | **91.19** | **89.10** | **157.94** | | | **237.19** | | **179.89** | | **136.50** | **124.10** | **1540.28** |

ಮುಖ್ಯ ಲೆಕ್ಕಾಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.